Reg. No. | | | | | | | | | |

**BCMKAL 154**

# ಗುಣಾಂಕ ಆಧಾರಿತ ಎರಡನೆಯ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ, ಎಪ್ರಿಲ್/ಮೇ 2018

## (2017-18 Batch Onwards)

## ಕನ್ನಡ

## ಕನ್ನಡ ಭಾಷಾ ಪತ್ರಿಕೆ – II

Time : 3 Hours

Max. Marks : 80

I. ಈ ಕೆಳಗಿನ ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರಿಸಿರಿ. (8×3=24)

1) ತಾಯಿ ಹಾಗೂ ಮಗಳ ಪ್ರೀತಿ ಜನಪದ ಹಾಡಿನಲ್ಲಿ ಹೇಗೆ ಮೂಡಿಬಂದಿದೆ ?

ಅಥವಾ

ತಿರುನೀಲಕಂಠರ ಗುಪ್ತವ್ರತವನ್ನು ಶಿವನು ಬಹಿರಂಗ ಪಡಿಸಿದ ಬಗೆ ಹೇಗೆ ?

2) ಮೂಗು ಪ್ರಬಂಧದಲ್ಲಿ ಮೂಗಿನ ಕಾರ್ಯವೈಖರಿಯನ್ನು ಹೇಗೆ ವರ್ಣಿಸಲಾಗಿದೆ ?

ಅಥವಾ

ಪಟ್ಟದ ಗೊಂಬೆಗಳೊಂದಿಗಿರುವ ಭಾವನಾತ್ಮಕ ಸಂಬಂಧ ಕಥೆಯಲ್ಲಿ ಹೇಗೆ ವ್ಯಕ್ತವಾಗಿದೆ ? ನಿರೂಪಿಸಿ.

3) ರಾಜಕುಲಗಳ ಸಂಘರ್ಷ ವ್ಯಕ್ತಿಗತ ಬದುಕನ್ನು ನಲುಗಿಸುವ ದುರಂತವನ್ನು ಕೊಳ್ಳಿ ನಾಟಕದಲ್ಲಿ ಹೇಗೆ ಚಿತ್ರಿಸಲಾಗಿದೆ ?

ಅಥವಾ

ಉಜ್ಜಿ ಯಾರು ? ಅವಳು ಯಾವ ವಿಧಾನದಲ್ಲಿ ಯಾವ ಕಾರಣಕ್ಕಾಗಿ ದ್ರೌಪದಿಯಲ್ಲಿಗೆ ಬಂದಳು ? ವಿವರಿಸಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (5×3=15)

1) ಕೆಂಪೇಗೌಡ ತನ್ನ ಸೊಸೆಯನ್ನು ಬಲಿಕೊಟ್ಟ ಪ್ರಸಂಗವೇನು ?

ಅಥವಾ

ಗೌತಮ ಮತ್ತು ದೇವದತ್ತರ ನಡುವೆ ನಡೆದ ವಾಗ್ವಾದವೇನು ?

2) ಗೌಡರ ಗಡಿಯಾರ ಕದಿಯಲು ಜೋಗಿ ನಿರ್ಧರಿಸಲು ಕಾರಣವೇನು ?

ಅಥವಾ

ರಮಾಬಾಯಿಯವರ ಸಾಂಸಾರಿಕ ಕಷ್ಟಗಳೇನು ?

3) ಪ್ರಾತಿಕಾಮಿಯು ಬದುಕಿಕೊಳ್ಳಲು ಮಾಡಿದ ಉಪಾಯವೇನು ?

ಅಥವಾ

ಭೀಮನೇ ಹಸ್ತಿನಾವತಿಯ ರಾಜನಾಗಬೇಕು ಎಂಬುದಕ್ಕೆ ಕಾರಣವೇನು ?

III. ಈ ಕೆಳಗಿನವುಗಳಲ್ಲಿ ಒಂದು ಪದ್ಯದ ಹಿನ್ನಲೆ, ಭಾವಾರ್ಥ ಮತ್ತು ಸ್ವಾರಸ್ಯ ಬರೆಯಿರಿ. (5×1=5)

ಧರೆಯನೊಲ್ಲವನೊಂದೆ ಕೊಡೆಯಿಂದಾಳುವುದು
ಗಿರಿಯ ಗುಹೆಯೊಳು ಕುಳಿತು ತಪವ ಮಾಡುವುದು
ತರುಣಿಯರ ಕಂಕುಳೊಳು ಕೈಯಿಕ್ಕಿ ನಗಿಸುವುದು
ಕರಿಯ ಮೇಲಂಬಾರಿಯಲ್ಲಿ ಮೆರೆಯುವುದು

ಅಥವಾ

ಮನೆ ಮನೆತನ ಮರ್ಯಾದೆ ಹಬ್ಬ ಹರಿದಿನ
ಬಿಡುದಿನಗಳೆಂದು ಲೆಕ್ಕ ಹಾಕಿದವಳು;
ಚಂದಾದ ರಂಗೋಲಿ ಬಿಡಿಸಿದವಳು
ಬಂದವರ ಆದರಿಸಿ ತನ್ನವರು ಎಂದು
ಪ್ರೀತಿಯಿಂದ ನೋಡಿಕೊಂಡವಳು

IV. ಕೆಳಗಿನವುಗಳಲ್ಲಿ ಎರಡನ್ನು ಸಂದರ್ಭ ಸಹಿತ ವಿವರಿಸಿರಿ. (4×2=8)

1) ಮೂವ ರಂಗ್‌ಡ ಬಾವ್‌ಟಕೇ (ಮೂರು ವರ್ಣದ ಬಾವುಟಕೇ).
2) ಮುಟ್ಟಿದಡೆ ಶಿವನಾಣೆ.
3) ಗಿರಿಯ ಗುಹೆಯೊಳು ಕುಳಿತು ತಪವ ಮಾಡುವುದು.
4) ತುಂಬಿದ ಬಸುರಿಯನು ಕೊಟ್ಟರೆ ನಿಲುವುದು ಕೋಟೆಯ ಬಾಗಿಲು.

V. ಅ) ಕೆಳಗಿನವುಗಳಲ್ಲಿ ಎರಡರ ಕುರಿತು ಟಿಪ್ಪಣಿ ಬರೆಯಿರಿ. (4×2=8)

1) ಸರಕು ಹಾಗೂ ಸೇವಾತೆರಿಗೆ.
2) ಬಿದಿರಿನ ಹೂ.
3) ಹಂಟರ್ ಕಮಿಷನ್ ಮತ್ತು ರಮಾಬಾಯಿ.
4) ಎಚ್ಚೆಸ್ಕೆ.

ಆ) ಕೆಳಗಿನವುಗಳಲ್ಲಿ ಎರಡರ ಕುರಿತು ಟಿಪ್ಪಣಿ ಬರೆಯಿರಿ. (4×2=8)

1) ಡಾ. ಜಿ. ಎಸ್. ಭಟ್ಟ.

2) ಪ್ರಾತಿಕಾಮಿ.

3) ಕೊನೆಯಲ್ಲಿ ಬರುವ ನಾಟಕದ ಏಳನೆಯ ಮೆಟ್ಟಿಲಿನ ವಿಶೇಷತೆ.

4) 'ಕೊಳ್ಳಿ' ನಾಟಕದಲ್ಲಿ ಕಾಣಿಸುವ ಅರಣ್ಯ ಸಂಸ್ಕೃತಿ.

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (1×12=12)

1) ಕೊಡಗನ್ನು ಯಾರ ನೆತ್ತಿಯ ಕಿರೀಟವೆಂದು ಪೂವಯ್ಯ ಹೇಳುತ್ತಾರೆ ?

2) 'ಕಾಲಾಂತರಗಳಲ್ಲಿ ನಾರಿ' ಕವನದ ಕವಯಿತ್ರಿ ಯಾರು ?

3) ಕೆಂಪೇಗೌಡನನ್ನು ಮೆಚ್ಚಿ ಬಳುವಳಿ ಕೊಟ್ಟ ಅರಸನು ಯಾರು ?

4) ತಿರುನೀಲಕಂಠನ ಪತ್ನಿ ಯಾರು ?

5) ಜಿ.ಎಸ್.ಟಿ. ಯು ಜಾರಿಗೆ ತಂದ ಅಪೂರ್ವ ಪರಿಕಲ್ಪನೆಯು ಯಾವುದು ?

6) 'ಹಸಿರುಹೊನ್ನು' ಯಾರು ಬರೆದ ಕೃತಿ ?

7) ರಮಾಬಾಯಿಯವರ ವ್ಯಕ್ತಿಚಿತ್ರಣ ಬರೆದವರು ಯಾರು ?

8) ಎಚ್ಚೆಸ್ಕೆಯವರ ಪೂರ್ತಿ ಹೆಸರು ಏನು ?

9) ಕೌರವನಿಗೆ ಅರಗಿನ ಮನೆ ನಿರ್ಮಿಸಲು ನೆರವಾದವನು ಯಾರು ?

10) ನಾಟಕದ ಐದನೆಯ ದೃಶ್ಯವು ಎಲ್ಲಿ ನಡೆದ ಹಾಗೆ ಕಲ್ಪಿಸಲಾಗಿದೆ ?

11) ಡಾ.ಜಿ.ಎಸ್.ಭಟ್ಟರು ಬರೆದ 'ನೆನಪಿನ ರಂಗಸ್ಥಳ' ಎಂಬ ಪ್ರಖ್ಯಾತ ಜೀವನ ಚರಿತ್ರೆ ಯಾರ ಬಗ್ಗೆ ಇದೆ ?

12) ಅರ್ಜುನನು ಮತ್ಸ್ಯಯಂತ್ರ ಭೇದಿಸಲು ಬಳಸಿದ ಬಿಲ್ಲಿನ ಹೆಸರು ಏನು ?